# ಬಣ್ಣ ಬದಲಿಸೋ ತಿಲಾತ

ಪ್ರಕೃತಿ ಚಿತ್ರ–ವಿಚಿತ್ರವಾದ ಸಸ್ಯದ ಪ್ರಭೇದಗಳನ್ನು ಜೀವ ಸಂಕುಲಕ್ಕೆ ನೀಡಿದೆ. ಒಂದೇ ದಿನದಲ್ಲಿ ಒಂದು ಹೂವು ಬೇರೆ ಬೇರೆ ಬಣ್ಣವನ್ನು ತಾಳುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಅದುವೆ ತಿಲಾತ ಸಸ್ಯದ ಹೂ. ವೈಜ್ಞಾನಿಕವಾಗಿ ಹೈಬಿಸ್ಕಸ್ ಮುಟಾಬಿಲಿಸ್ ಎಂದು ಕರೆಯಲಾಗುವ ಈ ಹೂವು ದಾಸವಾಳ ಜಾತಿಗೆ ಸೇರಿದ ಒಂದು ಪ್ರಭೇದ, ಇಂಗ್ಲಿಷಿನಲ್ಲಿ ಕಾಟನ್ ರೋಸ್‌ಮ್ಯಾಲೊ ಎನ್ನುತ್ತಾರೆ. ದತ್ತಾತ್ರೇಯ ಹೂವು, ಸಹನಾಮೃತ ಪುಷ್ಪ, ತ್ರಿಗುಣಾತ್ಮಕ ಹೂ ಎಂಬಿತ್ಯಾದಿ ಹೆಸರುಗಳಿಂದ ಗುರುತಿಸುವುದುಂಟು. ಇದರ ವಿಶೇಷವೆಂದರೆ ಬೆಳಿಗ್ಗೆ ಬಿಳಿ, ಮಧ್ಯಾಹ್ನ ನಸುಗೆಂಪು ಮತ್ತು ಸಂಜೆ ಕೆಂಪು ಬಣ್ಣ ಬದಲಿಸೋ ಗುಣವನ್ನು ಹೊಂದಿದೆ. ಈ ಹೂವು ನಾಲ್ಕರಿಂದ ಆರು ಇಂಚುಗಳ ವ್ಯಾಸ ಹೊಂದಿದ್ದು, ದಳಗಳು ಒಂದಕ್ಕೊಂದು ಒತ್ತೊತ್ತಾಗಿದ್ದರೂ ಬಿಡಿಸಿದಂತೆ ಕಾಣುತ್ತದೆ. ಈ ಸಸ್ಯ ಸಾಮಾನ್ಯವಾಗಿ 10–15 ಅಡಿ ಎತ್ತರದವರೆಗೆ ಬೆಳೆಯುತ್ತದೆ. ಹಿತ್ತಿಲಿನಲ್ಲಿ ಒಂದು ರೆಂಬೆ ನೆಟ್ಟರೂ ಬೇಗ ಬೆಳೆದು ಗಿಡದ ತುಂಬ ಹೂವು ಬಿಡುವ ಸರ್ವಕಾಲಿಕ ಸಸ್ಯ.

ಸೂರ್ಯನ ಶಾಖಕ್ಕೆ ತಕ್ಕಂತೆ ತನ್ನ ಬಣ್ಣ ಬದಲಾಯಿಸುವ ಈ ಹೂವು ಮತ್ತು ಸಸ್ಯ ಸಾಕಷ್ಟು ಔಷಧೀಯ ಗುಣಗಳನ್ನು ಹೊಂದಿದೆ. ಇದರ ಎಲೆ ಮತ್ತು ಹೂವುಗಳಲ್ಲಿ ಉರಿಮೂತ್ರವನ್ನು ತಣಿಸುವ, ಚರ್ಮ ಕಾಯಿಲೆ ಗುಣಪಡಿಸುವ ಶಕ್ತಿಯಿದೆ.

**ಚಿತ್ರ- ಬರಹ: ವಿ.ಸಿ. ಪಾಟೀಲ, ಸಾಗರ**





# ನೆರಳಿನಲ್ಲಿ ಸವಾರಿ!

ನಮ್ಮ ರಾಯಚೂರು ಕಡುಬಿಸಿಲಿಗೆ ಹೆಸರುವಾಸಿ. ಈ ಬಿಸಿಲಿನ ತೀವ್ರ ತಾಪದಿಂದ ವಿಪರೀತ ಬೆವರು, ಚರ್ಮರೋಗ, ವಾಂತಿ, ತಲೆಸುತ್ತು ಮೊದಲಾದ ವಿವಿಧ ರೀತಿಯ ಸಮಸ್ಯೆಗಳು ಎದುರಾಗುತ್ತವೆ. ಇವುಗಳಿಂದ ರಕ್ಷಿಸಿಕೊಳ್ಳಲು ರಾಯಚೂರಿನ ಜಿಲ್ಲಾ ಆಯುಷ್ ವೈದ್ಯಾಧಿಕಾರಿಗಳಾದ ಡಾ.ರೂಪಾಬಾಯಿ ತಮ್ಮ ದ್ವಿಚಕ್ರ ವಾಹನಕ್ಕೆ ಕೊಡೆ ಆಕಾರದ ಸಾಧನವನ್ನು ಅಳವಡಿಸಿಕೊಂಡಿದ್ದಾರೆ. ಉರಿ ಬಿಸಿಲಿನಿಂದ ಪಾರು ಮಾಡುವ ಈ ಸಾಧನವು ಜನರ ಗಮನ ಸೆಳೆಯುತ್ತಿದೆ.

**-ಈರಣ್ಣ ಬೆಂಗಾಲಿ, ರಾಯಚೂರು**

# ತಂಪು ಪಾನಿಯ 'ಸೋಲ್ ಕಡಿ'

ಬೇಸಿಗೆಯಲ್ಲಿ ಎಲ್ಲ ಕಡೆ ತಂಪು ಪಾನಿಯ ಸಿಗುವ ಹಾಗೆ ಬೆಳಗಾವಿಯಲ್ಲಿ ಗುಲಾಬಿ ಬಣ್ಣದ 'ಸೋಲ್ ಕಡಿ' ಸಿಗುತ್ತದೆ. ಸೋಲ್ ಕಡಿ ಅಂದರೆ ಮಜ್ಜಿಗೆಯ ಹಾಗೆ ಕುಡಿಯುವ ತಂಪು ಪಾನಿಯ. ಪುದೀನ, ಶುಂಠಿ, ಹಸಿಮೆಣಸು, ಇಂಗು, ಉಪ್ಪು, ಕೊಬ್ಬರಿ ತುರಿ ಬೆರೆಸಿ ನುಣ್ಣಗೆ ರುಬ್ಬಿ ನೀರಿನೊಡನೆ ಈ ಮಸಾಲೆಗಳನ್ನು ಬೆರೆಸಿದಾಗ ಆರೋಗ್ಯಕರ ಸೋಲ್ ಕಡಿ ಕುಡಿಯಲು ತಯಾರಾಗುವುದು. ಇದರಲ್ಲಿ ವಿಟಮಿನ್ ಎ ಮತ್ತು ಬಿ ಇರುವುದರಿಂದ ಬಾಯಿ ಹುಣ್ಣಿಗೆ ಹಾಗೂ ಕಣ್ಣಿನ ತೊಂದರೆಗೆ ಬಹಳ ಒಳ್ಳೆಯದು. ಬೆಳಗಾವಿಯ ಗಲ್ಲಿ ಗಲ್ಲಿಗಳಲ್ಲಿ ಬಾಟಲಿಗಳಲ್ಲಿ ತುಂಬಿಸಿಟ್ಟು ಹತ್ತು ರೂಪಾಯಿ ಗ್ಲಾಸ್‌ನಂತೆ ಮಾರುತ್ತಾರೆ.

**-ಜಗದೀಶ ಎಂ. ಸಂಗಣ್ಣವರ, ಬೆಳಗಾವಿ**

